# ನಿನ್ನ ಪ್ರೀತಿಯ ಪರಿಯನೆಂತು ಬಣ್ಣಿಸಲೇ ತಾಯಿ

– ಮಾರ್ಷಲ್ ಶರಾಂ.

# HOW CAN I EXPLAIN YOUR LOVE MOM

– Marshal Sharam
Associate of Professor
Dept of Kannada
Govt. First Grade College,
Hosanagar 577 418

ಇಂದು ವಿಶ್ವ ತಾಯಂದಿರ ದಿನ. ತಾಯಿಗೆ ವ್ಯಾಖ್ಯೆ, ವಿವರಗಳು ಬೇಕಿಲ್ಲ. ಆದರೆ ಹೆತ್ತವರೆಲ್ಲ ತಾಯಿಯಾಗಲಾರರು. ತಾಯ್ತನ ಹೊರುವ ಹೆರುವ ಅಥವಾ ಪೊರೆಯುವ ಹೊಣೆಗಾರಿಕೆಗೆ ಸೀಮಿತವಲ್ಲ. ಹೆಣ್ತನವನ್ನು ಸಾರ್ಥಕಗೊಳಿಸುವ ಆಮೂರ್ತ ರೂಪವೇ ತಾಯಿ. ಇತ್ತೀಚಿನ ಎರಡು ಸುದ್ದಿ ತುಣುಕುಗಳು 1. ತೊಂಬತ್ತು ವರ್ಷದ ಹನುಮವ್ವ ಎಂಬ ತಾಯಿ ಸತತವಾಗಿ ಆರವತ್ತು ವರ್ಷಗಳಿಂದ ಕೈಕಾಲು ಸ್ವಾಧೀನ ಇಲ್ಲದೆ ಬಿದ್ದಲ್ಲೇ ಇರುವ ತನ್ನ ಮಗ ಅಕ್ಕಿರಾಮನ ಸೇವೆ ಮಾಡುತ್ತಿದ್ದಾಳೆ. 2. ತಂಟೆ ಮಾಡಿದ ಬಗ್ಗೆ ತಂದೆ ಹೇಳ್ತಾನೆ; ಮೇಸ್ಟ್ರೆ ಸಮಾ ಪೆಟ್ಟು ಕೊಡಿ, ಬುದ್ಧಿ ಬರ್ಲಿ. ತಾಯಿ ಹೇಳ್ತಾಳೆ; ನೋವಾಗೋ ಹಾಗೆ ಹೊಡೀಬೇಡಿ, ಭಯ ಹುಟ್ಸಿ. ಹೀಗೆ ಹೇಳಲು ತಾಯಿಗೆ ಮಾತ್ರ ಸಾಧ್ಯ. ಏಕೆಂದರೆ ಆಕೆ ತಾಯಿ.

ಜಗತ್ತಿಗೆ ಬೇಧಿಸಲು ಸಾಧ್ಯವಾಗದ ರಹಸ್ಯವೆಂದರೆ ತಾಯ್ತನ. ಮಗುವಿನ ಸೃಷ್ಟಿಕ್ರಿಯೆಯಲ್ಲಿ ತಾಯ್ತಂದೆ ಇಬ್ಬರೂ ಸಮಬಲರೇ. ಅದರೂ ಮಗುವಿನ ಮೊದಲ ತೊದಲು ಮಾತು ಅಮ್ಮ. ಕರುಳ ಕುಡಿಯ ಮೊತ್ತ ಮೊದಲ ಈ ಅಸ್ಪಷ್ಟ ಕರೆಗಾಗಿ ತಾಯಿ ಹೃದಯ ತವಕಿಸುತ್ತದೆ. ಪ್ರೀತಿಸಿ, ಒಲಿಸಿ, ಬೈದು, ಹಿತನುಡಿದು, ವಾತ್ಸಲ್ಯದಲ್ಲಿ ಮೀಯಿಸಿ ಮಕ್ಕಳಿಂದ ಬೇಕದಾದ್ದನ್ನು ಪಡೆಯುವ ತಾಕತ್ತೇ ತಾಯಿ. ಗಂಡನ ಒರಟುತನಕ್ಕೆ ಒಲವಿನ ಸೆರಗು ಹೊದೆಸಿ ಮಕ್ಕಳ ಮುದ್ದನ್ನು ಉಣ್ಣುವ ಆ ಹೃದಯದ ಕರೆಗೆ ಮರುಳಾಗದವರು ಯಾರು? ಎಂಥಾ ಬಲಹೀನನ್ನೂ ಬಲಶಾಲಿಯಾಗಿ ಪರಿವರ್ತಿಸಬಲ್ಲ ಶಕ್ತಿ ತಾಯಿ. ಇಂತಹ ಅಸಂಖ್ಯ ತಾಯಂದಿರಿಗೆ ಕನ್ನಡ ಕವಿಗಳು ತುಂಬು ಹೃದಯದ ನುಡಿನಮನ ಸಲ್ಲಿಸಿದ್ದಾರೆ. ತಾಯಿಯಾಗಿ, ಅಮ್ಮನಾಗಿ, ಅವ್ವನಾಗಿ, ಆಕೆ ನಮ್ಮ ಕಾವ್ಯಾಭಿವ್ಯಕ್ತಿಯಲ್ಲಿ ಕಾಣಿಸಿಕೊಂಡಿದ್ದಾಳೆ. ಕವಿಗಳಿಗೆ ಇತರ ಪರಿಕಲ್ಪನೆಗಳಂತೆ ತಾಯಿ ಕಲ್ಪನೆಯ ವಸ್ತುವಲ್ಲ. ನಿಜಜೀವನದ ತಾಜಾತಾಜಾ ಅನುಭವದ ರಸಗಳಿಗೆಗಳೇ ತಾಯಿ ರೂಪದ ಅಭಿವ್ಯಕ್ತಿ.

ತಾಯಿ ಮಡಿಲು ಮಕ್ಕಳಿಗೆ ಸುಖದ ಜೋಳಿಗೆ. ತಾಯ ಬೆಚ್ಚನೆಯ ಸ್ಪರ್ಶದಿಂದ ಕಂದನ ಸುಂದರ ಭವಿಷ್ಯ ಗೂಡು ಕಟ್ಟೋದೇ ತಾಯ ಮಡಿಲಲ್ಲಿ. ಹಿರಿಯ ಕವಿ ಚನ್ನವೀರ ಕಣವಿಯವರು ತಾಯೆ ನಿನ್ನ ಮಡಿಲೊಳು ಎಂದು ಬಾಲ್ಯವನ್ನು ಸ್ಮರಿಸುವ ಮೂಲಕ ತಾಯಿಯನ್ನು ನೆನಪಿಸುತ್ತಾರೆ.

ನಿನ್ನ ಬಸಿರೊಳೊಗೆದು ಬಂದು । ಎದೆಯ ಹಾಲ ಕುಡಿದು ನಿಂದು

ತೋಳ ತೊಟ್ಟಿಲಲ್ಲಿ ತೂಗಿ ಲಾಲಿಯಾಡಿದೆ.

ಎಂಬ ಮಾತಿನ ಮೂಲಕ ತಾಯಿಯ ತೋಳಲ್ಲೆ ಆಡಿದ ಮಧುರ ದಿನಗಳನ್ನು, ಕ್ಷಣಗಳನ್ನು ಉಲ್ಲೇಖಿಸುತ್ತಾರೆ. ಎನ್ನನ್ನೊಂದು ರೂಪು ಮಾಡಿ ಭೂಮಿಗಿಳಿಸಿತು. ಎಂದು ತಮ್ಮ ವ್ಯಕ್ತಿತ್ವ ರೂಪಿಸಿದ ತಾಯಿಯನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಹೆಣ್ಣು ಮಕ್ಕಳಂತೂ ತಾಯಿಯನ್ನು ಬಿಗಿಯಾಗಿ ಅಮರಿಕೊಂಡಿದ್ದಾರೆ. ತವರಿನ ಪ್ರೇಮದ ಧಾರೆಯಲ್ಲಿ ಮಿಂದ ಸ್ತ್ರೀಸಂವೇದನೆಗಳು ತಾಯಿಯನ್ನು ವಾತ್ಸಲ್ಯ, ಪ್ರೀತಿ, ಸ್ನೇಹ ಸಂಬಂಧಗಳ ಸುಂದರ ಕಲಾತ್ಮಕ ಅಭಿವ್ಯಕ್ತಿಯಾಗಿ ಕಂಡಿವೆ. ಮನದಾಳದ ನೋವನ್ನು, ಜಗತ್ತಿನ ಸಕಲ ಜಂಜಾಟಗಳನ್ನು ನಿವಾರಿಸಿಬಿಡುವ ಏಕೈಕ ಮಂತ್ರ ತಾಯಿ. ಗೀತಾಚಂದ್ರ ಶೇಖರರ ತಾಯಿ ಕವನ.

ಚಂದಮಾಮನ ತೋರಿ । ತುತ್ತನಿಟ್ಟವಳು

ಕಂದ ನಗುತಿರು ಎಂದು । ಹರಸಿದಳು

ಇಲ್ಲಿ ಸಾಂಪ್ರಾದಾಯಿಕ ನೆಲೆಯಲ್ಲೇ ತಾಯಿಯನ್ನು ಸ್ವೀಕರಿಸಿದ್ದಾರೆ. ಕವಿತೆಯ ಮುಂದಿನ ಸಾಲುಗಳಲ್ಲಿ *ಸುಡುವುದೇ ಸಿಡಿಲು, ಬಡಿವುದೇ ಬಿರುಗಾಳಿ, ನಾನಿರಲು ಈ ತಾಯಿಯ ಹರಕೆಯ ಸೂರಿನೊಳಗೆ* ಎಂದು ತಾಯಿಯ ಅರ್ಥವನ್ನು ಹಿಗ್ಗಿಸುತ್ತಾರೆ.

ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯನವರು ತಾಯಿ ಚುಟುಕು ತಾಯಿಗಿರುವ ಎಲ್ಲ ಅರ್ಥಗಳನ್ನು ಒಮ್ಮೆಲೇ ಧ್ವನಿಸಿಬಿಡುತ್ತದೆ. ತಾಯ್ತನದ ಅಮೂರ್ತತೆಯನ್ನು ವಿಸ್ತಾರವಾಗಿ ಕಟ್ಟಿಕೊಡುತ್ತದೆ.

ಮೊಲೆಹಾಲಿನಿಂದ ತಾಯಿ । ಕವಿತೆ ಬರೆಯುವುದಿಲ್ಲ

ಮೊಲೆಯೂಡುವಳು ಬಾಲಕೃಷ್ಣನಿಗೂ ಕಂಸನಿಗೂ

ತಾಯ್ತನಕ್ಕೊಳಿತು ಕೆಡುಕೆಂಬುದೇ ಇಲ್ಲ

ಅದು ಪ್ರೀತಿ ಪ್ರೀತಿ ಪ್ರೀತಿ........

ತಾಯಿಯ ಮೊಲೆಹಾಲು ಮಕ್ಕಳಿಗೆ ಮಾತ್ರ. ಶಿಷ್ಯನೂ, ದುಷ್ಟನೂ ಇಬ್ಬರೂ ಅದೇ ಹಾಲನ್ನು ಕುಡಿದವರು. ಹಾಲೂಡಿಸುವುದಷ್ಟೇ ಅವಲ ಕಾಯಕ. ಇವನೊಳ್ಳೆವ ಹಾಲೂಡಿಸುವ, ಇವ ಕೆಟ್ಟವ ಹಾಲೂಡಿಸಲಾರೆ ಎಂಬ ತಕರಾರು ತಾಯಿ ಕರುಳಿಗಿಲ್ಲ. ತಾಯಿಗೆ ಗೊತ್ತಿರುವುದೊಂದೇ ಪ್ರೀತಿ. ಅದು ಪ್ರೀತಿ ಮಾತ್ರ.

ತಾಯಿಯ ಪ್ರೀತಿಯನ್ನು ಹಾಡಿ ಹೊಗಳಿದ ಹಾಗೆ ಆಕೆಯ ಸ್ಥಿತಿಗೆ ಮರುಗಿದ ಕವಿಗಳಿದ್ದಾರೆ. ತಾಯಿಯ ಪರಿಶ್ರಮ, ಅಪ್ಪನ ದಬ್ಬಾಳಿಕೆಗೆ ತತ್ತರಿಸಿದ ಆಕೆಯ ಜೀವನ ಕತೆಯನ್ನು ಕವಿಗಳು ಉಲ್ಲೇಖಿಸಿದ್ದಾರೆ. ಡಾ.ನಾ. ಮೊಗಸಾಲೆಯವರ ಅಮ್ಮ; ಒಂದು ಅನುಭವ ಕವಿತೆಯಲ್ಲಿ 'ಅಮ್ಮ ಎಂದಾಗ ನನಗೆ ಗೋವಿನ ಕತೆಯ ನೆನಪು; ತಲೆ ತಗ್ಗಿಸಿ ಗೂಟದ ವರ್ತುಲದಲ್ಲಿ ಸುತ್ತುವ ಚಿತ್ರ.... ಕೊಟ್ಟಿಗೆಯಲ್ಲಿರುವ ಕಪಿಲೆಯ ಹಾಗೆ ಆಕೆಯ ದುಡಿತ ಮಾತಿಲ್ಲ ಎಂದು ತಾಯಿಯ ಸೀಮಿತ ಪರಿಧಿಯನ್ನು ಪರಿಚಯಿಸುತ್ತಾರೆ. ಸ್ವಂತಿಕೆ ಇಲ್ಲದೆ ಅಪ್ಪನನ್ನೇ ಆಶ್ರಯಿಸಿರುವ ತಾಯಿಯ ಸ್ಥಿತಿಯನ್ನು ಅಪ್ಪ ಸತ್ತ ನಂತರವೂ *ಹಗ್ಗ ಬಿಚ್ಚಿಕೊಂಡರೂ ಗೂಟಕ್ಕಂಟಿಕೊಂಡಿರುವುದೇ ರೂಢಿಯಾಗಿ* ಎಂಬ ಪ್ರತಿಮೆಯಲ್ಲಿ ಧ್ವನಿಸುತ್ತಾರೆ. ಮೊಗಸಾಲೆಯವರು ತಾಯಿಯನ್ನು ಕುರಿತು *ತಾಯಿ* ಎಂದರೆ ಮತ್ತು *ನನಗಾಕೆ ದೇವರಲ್ಲ ತಾಯಿ* ಎಂಬ ಇನ್ನೆರಡು ಕವನಗಳನ್ನು ರಚಿಸಿದ್ದಾರೆ. ಅಮ್ಮ; ಒಂದು ಅನುಭವ ಬರೆದ ಇಪ್ಪತ್ತಾಲ್ಕು ವರ್ಷಗಳ ನಂತರದ ದೀರ್ಘ ಅನುಭವದಲ್ಲಿ ನನಗಾಕೆ ದೇವರಲ್ಲ ತಾಯಿ ರಚನೆಯಾಯಿತು. ಸಹಜವಾಗಿ ಕಾಲದೊತ್ತಡದಲ್ಲಿ ತಾಯಿಯ ಪರಿಕಲ್ಪನೆ ವಿಸ್ತಾರವಾಯಿತು. ಈಗ ಆಕೆ

ಗೂಟಕ್ಕೆ ಬಿಗಿದ ದನದ ಹಾಗಾಗದೆ । ತೋಟಕ್ಕೆ ಹೋದರೆ ಗಿಲುಕದ ಅಡಿಕೆ ಗೊನೆಯಾಗಿ। ಹಟ್ಟಿಯಲ್ಲಿ ಕೆಚ್ಚಲಾಗಿ । ಹೊಲದ ನೀರಾಗಿ। ಎಲ್ಲೆಲ್ಲೂ ಆವರಿಸಿಕೊಂಡಿದ್ದಾಳೆ. ಲೋಕಜ್ಞಾನ ಅವಳನ್ನು ಒಳಕೋಣೆಯಿಂದ ಈಚೆ ಬರುವಂತೆ ಮಾಡಿದೆ. ರುಚಿರುಚಿಯ ಅಡಿಗೆ ಎಂದರೆ ಅಲ್ಲಿ ತಾಯ ಕೈ ಕೆಲಸ ಮಾಡಿದೆ ಎಂದೇ ಅರ್ಥ. ಮೊಗಸಾಲೆ ಹೇಳುತ್ತಾರೆ.

ಉರಗೆ ತಂಬ್ಬಿ ಹಾಗಲಕಾಯಿ ಬೆಂದಿ

ಸೌತೆ ಮೇಲಾರ ಹಾಲುಬಾವಿಗಳೆಲ್ಲ

ಇನ್ನು ಯಾರು ಮಾಡಿದರೂ ಹಾಗಿರವು ಅವು

ತಾಯಿ ಎಂದರೆ ಆಕೆ ತಾಯಿಯೇ. ದೇವರಾಗಲು ಸಾಧ್ಯವಿಲ್ಲ. ಏಕೆಂದರೆ ದೇವರಲ್ಲೂ ಕಾಣಸಿಗದ ತಾಯ್ತನ ತಾಯಲ್ಲಿ ಮಾತ್ರ ಸ್ಫುರಿಸುತ್ತದೆ.

ಮಕ್ಕಳ ಲಾಲನೆ ತಾಯಿಯ ಆದ್ಯ ಕರ್ತವ್ಯ. ಅವರ ಪೋಷಣೆಯಲ್ಲಿ ತನ್ನ ವೈಯಕ್ತಿಕ ಸುಖ–ಸಂತೋಷಗಳನ್ನು ಕಳೆದುಕೊಳ್ಳುತ್ತಾ, ಕೌಟುಂಬಿಕ ಸಾಮಾಜಿಕ ಬೆಳವಣಿಗೆ ತೇದುಕೊಂಡವಳು ತಾಯಿ. ತಾನು ಕೃಶವಾದರೂ ಮಕ್ಕಳು ಹೆಮ್ಮರವಾಗಿ ಬೆಳೆಯಲೆಂಬ ಹಾರೈಕೆ ತಾಯೀದು. ಗಂಗಾಧರ ಚಿತ್ತಾಲರು ತಾಯಿ ಕವನದಲ್ಲಿ

ಏಳು ಮಕ್ಕಳ ಹೊರೆದು । ಕೆಮ್ಮಿ ಕೆಮ್ಮಿ ಸಣ್ಣಾದವಳು

ಒಳಗೊಳಗೇ ಒರಲೆ ಹತ್ತಿ ಮೈಗೂಡು ಕಳಚಿ ಮಣ್ಣಾದವಳು

ಕಮ್ಮಿ ಎನಿಸಲೇ ಇಲ್ಲ ಯಾವ ನೆಮ್ಮದಿಗೂ ಉಂಡಷ್ಟು ದಿನ

ಆ ಕೈಯ ಮಮತೆಯ ಅನ್ನ।

ಎಂದು ತಾಯಿ ತನ್ನ ಕಂದಮ್ಮಗಳಿಗಾಗಿ ಸವೆದು ಹೋಗುವ ಬಗೆಯನ್ನು ವರ್ಣಿಸುತ್ತಾರೆ. ತಾಯಿ ನೀಡುವುದು ಬರೀ ಅನ್ನವಲ್ಲ, ದಾರಿಯುದ್ದಕ್ಕೂ ಬಾಳಿನುದ್ದಕ್ಕೂ ಹಳಸದ, ಎಂದೆದಿಗೂ ಬರಿದಾಗದ ಮಮತೆಯ ಬುತ್ತಿ.

ಸ್ತ್ರೀವಾದಿ ನೆಲೆಯಲ್ಲಿ ತಾಯಿಯನ್ನು ಅರ್ಥೈಸುವ ಕವಯಿತ್ರಿಯರು ತಾಯಿಗೆ ಹೊಸ ಭಾಷ್ಯವನ್ನು ಬರೆದಿದ್ದಾರೆ. ತಾಯಿಯ ದಯನೀಯ ಸ್ಥಿತಿಗೆ ಹೆಣ್ಣು ಮನಸ್ಸುಗಳು ಕರಗಿವೆ. ಆ ಸ್ಥಿತಿಗೆ ಕಾರಣರಾದವರನ್ನು ಇಂತಹ ಕವಿತೆಗಳು ಹೃದಯಕ್ಕೆ ನಾಟುವಂತೆ, ಮನಸ್ಸು ನಾಚುವಂತೆ ಚುಚ್ಚುತ್ತವೆ. ಅನಸೂಯಾದೇವಿಯವರು ತಾಯಿಕರಳು ಕವಿತೆಯಲ್ಲಿ

ಹೆತ್ತೊಡಲು ಬೇಗೆ ಬೇನೆಗುತ್ತರಿಸದ । ನಿರುತ್ತರಕುಮಾರರು

ತಿಥಿಯೂಟದ ವೈಭವಕ್ಕೆ ಎಲ್ಲರನು ಕರೆದು । ಪಿಂಡ ಕಟ್ಟುತ್ತಿರುವ ಗಂಡುಗಳು

ಎಂದು ರೋಷಾವೇಶದಿಂದ ತಮ್ಮ ಮನದ ಕುದಿಯನ್ನು ಹೊರಚೆಲ್ಲುತ್ತಾರೆ. ಕರಳು ಕತ್ತರಿಸಿಕೊಂಡು ಜನ್ಮ ನೀಡಿದ ತಾಯಿಯನ್ನು ಗಂಡು ಮಕ್ಕಳು ತಾತ್ಸಾರದಿಂದ ನೋಡುವಾಗ ಅನಸೂಯಾದೇವಿಯವರ ಕಾವ್ಯ ಹರಿತವಾಗುತ್ತದೆ. *ಮುದುಕಿ ಬದುಕಿದ್ದಾಗಲೇ ಎದೆಗೆ ಬೆಂಕಿ ಇಟ್ಟದ್ದು* ಎಂಬ ರೂಪಕವು ಜೀವಂತವಿರುವಾಗ ಗಂಡು ಮಕ್ಕಳಿಂದ ಅಕೆ ಅನುಭವಿಸಿದ ಯಾತನೆಯನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ. ತಾಯಿಯ ಮೇಲೆ ಗಂಡು ಮಕ್ಕಳ ಕ್ರೌರ್ಯವನ್ನು ಕವಿತೆ ಧ್ವನಿಸುತ್ತದೆ. ಎಸ್.ಶೈಲಜಾ ಹಾಸನರವರು ತಾಯಿಯ ಹಾಡು ಮತ್ತು ಇವಳು ನನ್ನವ್ವ ಕವನಗಳಲ್ಲಿ ತಾಯಿ ಸಂವೇದನೆಯನ್ನು ಅಭಿವ್ಯಕ್ತಿಸಿದ್ದಾರೆ. ತಾಯಿಯ ಹಾಡು ಕವನವು ಅಧುನಿಕ ತಾಯಿಯ ಧೋರಣೆಯನ್ನು ಪ್ರಕಟಿಸುತ್ತದೆ. ತಾಯಿ ಮಗಳಿಗೆ ಹೇಳುವ

ಪುಟಿದೆದದ್ದು ನಿಲುವ । ಚೆಂಡು ನೀನು

ಪಡೆದ್ದನ್ನೆ ಕೊಡುವ । ದರ್ಪಣವಾಗೇ

ಭೂಮಿತೂಕದ । ತಾಳ್ಮೆ ಬೇಡ ಕಣೇ

ಈ ಮಾತುಗಳಲ್ಲಿ ಕಾಲಕ್ಕೆ ತಕ್ಕಂತೆ ಬದಲಾಗುವ ಮೌಲ್ಯಗಳಿವೆ. ಇನ್ನೂ ಗೂಟಕ್ಕೆ ಕಟ್ಟಿದ ಕಪಿಲೆಯ ಹಾಗೆ ಭ್ರಮೆಯಲ್ಲಿರದೇ ಅಧುನಿಕತೆಗೆ ತೆರೆದುಕೊಳ್ಳಬೇಕಾದ ಅನಿವಾರ್ಯತೆಯನ್ನು ಇಂತಹ ಕವಿತೆಗಳು ಒಳಗೊಂಡಿವೆ.

ತಾಯಿಯ ಹಾಗೆ ಅಮ್ಮ ನೂ ಅಧುನಿಕ ಕನ್ನಡ ಕಾವ್ಯಾಭಿವ್ಯಕ್ತಿಯಲ್ಲಿ ವಿಸ್ತಾರವಾಗಿ ಆವರಿಸಿಕೊಂಡಿದ್ದಾಳೆ. ಅಮ್ಮನ ಬದುಕು, ನೋವು–ನಲಿವು, ನಿತ್ಯಕಾಯಕ ನಿತ್ಯಕರ್ಮ, ಅವಿರತ ಶ್ರಮ–ಸೇವೆ, ಅರ್ದ್ರತೆಯ ಸೆಲೆಗಳನ್ನು ಕನ್ನಡ ಕವಿಗಳು ತಮ್ಮ ಕವಿತೆಗಳಲ್ಲಿ ಚರ್ಚಿಸಿದ್ದಾರೆ. ಅಮ್ಮನ ಪ್ರೀತಿ ಹೇಗೆ ಬತ್ತಲಾರದೋ ಹಾಗೇ ಆಕೆಯನ್ನು ಕುರಿತ ಕವನಗಳಿಗೂ ಮಿತಿಯಿಲ್ಲ. ಹಣೆಗೆ ಕುಂಕುಮ ಬೊಟ್ಟು, ತಲೆತುಂಬಾ ಸೆರಗು ಹೊದ್ದ, ಜಾಕುಳಿ ಸೀರೆಯ ತಾಯಿಂ ಈವರೆಗಿನ ಜಾಗತೀಕರಣದ ಅಮ್ಮನವರೆಗೆ ವಿವಿಧ ದೃಷ್ಟಿಕೋನದ ಅಮ್ಮಂದಿರು ಅಧುನಿಕ ಕನ್ನಡ ಕಾವ್ಯದಲ್ಲಿದ್ದಾರೆ.

ಅಮ್ಮನನ್ನು ಕುರಿತ ಕವನಗಳಲ್ಲಿ ತಟ್ಟನೆ ಗಮನಸೆಳೆದ ಅಪರೂಪದ ಕವಿತೆ *ಅರ್ಪಣೆ,* ಡಾ. ಕೆ. ಶಿವರಾಮ ಕಾರಂತರ *ಸೀಳ್ಗವನಗಳು* ಸಂಕಲನದ ಅರ್ಪಣಾ ಕವಿತೆ ಅಮ್ಮನಿಗೇ ಮೀಸಲು. ಕಾರಂತರು ಕಾವ್ಯಕೃಷಿಯಲ್ಲಿ ತೊಡಗಿದ್ದು ಅಪರೂಪವೇ ಈ ಸಂಕಲನದ ಐವತ್ತೇಳು ಕವನಗಳನ್ನು ಅಮ್ಮನಿಗೆ ಅರ್ಪಿಸುವ ಮೂಲಕ ಅಮ್ಮನ ನೆನಪು ಮಾಡಿಕೊಂಡಿದ್ದಾರೆ.

ಹಾಲಿಲ್ಲದಾ ದಿನದಿ ಕುಡಿಸಿದಳು ಇನ್ನೇನೊ । ಮಣ್ಣಿಯ ಬದಲು ತಿನಿಸಿದಳು ಮತ್ತೇನೊ

ಒಂದಕ್ಕೆ ಹತ್ತರ ಮುದ್ದನ್ನು ಮಾಡಿ । ಸದ್ದಿಲ್ಲದೆಯೆ ನನ್ನ ಬದುಕನ್ನು ಉಳಿಸಿದಳು

ಮುಂದೆ ನಾನೇನಾದೆ ಋಣಭಾದೆ, ಮರೆತು ?

ಮಣ್ಣಿ ತಿನ್ನಿಸುವ, ಮುದ್ದ ಮಾಡುವ, ಬದುಕನ್ನು ರೂಪಿಸುವ ಅಮ್ಮನಿಗೆ ನಾವು ಕೊಟ್ಟಿದ್ದೇನು? ಅವಳ ಋಣಬಾಧೆ ಮರೆತು ಕೃತಘ್ನನಾದ ಬಗ್ಗೆ ಕಾರಂತರು ಪರಿತಪಿಸುತ್ತಾರೆ.

ಅಮ್ಮ ನಮ್ಮನ್ನು ಮತ್ತೆ ಮತ್ತೆ ಕಾಡುತ್ತಾಳೆ. ಕೆದಕುತ್ತಾಳೆ, ಕುತೂಹಲ ಕೆರಳಿಸಿ ಬದುಕಿನಲ್ಲಿ ಉತ್ಸಾಹ ತುಂಬುತ್ತಾಳೆ. ಜೀವನದಲ್ಲಿ ಕಸುವನ್ನು ಆಸೆಯನ್ನು ಮೂಡಿಸುವ ದಾರಿದೀಪವಾಗುತ್ತಾಳೆ. ಬಿ.ಆರ್. ಲಕ್ಷ್ಮಣರಾವ್‌ರು ಅಮ್ಮನನ್ನು ಕುರಿತು ರಚಿಸಿದ ಎರಡು ಕವಿತೆಗಳನ್ನು ಅಮ್ಮ ತನಗೆ ಸ್ವಂತಿಕೆಯನ್ನು ಕಲಿಸಲಿ ಎಂದು ಆಶಿಸುತ್ತಾರೆ. ಅಮ್ಮನ ಆಸರೆಯಿಂದ ಹೊರಬರುವ ತವಕ ಅವರನ್ನು ಕಾಡುತ್ತದೆ.

ನಿನ್ನ ರಕ್ಷೆ ಗೂಡಲ್ಲಿ ಬೆಚ್ಚಗೆ । ಅಡಗಲಿ ಎಷ್ಟು ದಿನಾ।

ದೂಡು ಹೊರಗೆ ನನ್ನ। ಓಟ ಕಲಿವೆ, ಒಳನೋಟ ಕಲಿವೆ ನಾ

ಎಂದು ತಾಯನ್ನು ಕೇಳುತ್ತಾರೆ. ಹೊರಗ್ಹೋಗಿ ವಿಶ್ವವೆಲ್ಲ ಸುತ್ತಿ, ಅನುಭವಿಸಿ, ಇದ್ದದ್ದೆಲ್ಲ ಖಾಲಿಯಾಗಿ ಶೂನ್ಯ ಆವರಿಸಿದಾಗ *ಇಂಧನ ತೀರಲು ಬಂದೇ ಬರುವೆನು ಮತ್ತೆ ನಿನ್ನ ತೊಡೆಗೆ, ಮೂರ್ತ ಪ್ರೇಮದೆಡೆಗೆ* ಎಂದು ಅಮ್ಮನ ವ್ಯಕ್ತಿತ್ವವನ್ನು ವಿಕಾಸಗೊಳಿಸುತ್ತಾರೆ. ಅಮ್ಮನ ತೊಡೆಯ ಸಾಂಗತ್ಯವೇ ಅಂತದ್ದು. ಬಳಲಿ ಬಂದ ಮರಿಹಕ್ಕಿಗಳಿಗೆಲ್ಲ ವಿಶ್ರಾಂತಿಯ ತಾಣವೇ ಅಮ್ಮನ ತೊಡೆ.

ಅಮ್ಮನ ಸ್ವರೂಪ, ವ್ಯಕ್ತಿತ್ವ ಕವಿಯಿಂದ ಕವಿಗೆ ಭಿನ್ನ ಮತ್ತು ವಿಶಿಷ್ಟ. ಮೊಗೆದಷ್ಟು ಪುಟಪುಟದು ಬರುವ ಮಮತೆಯ ತೊರೆ ಅಮ್ಮನ ಮಡಲು. ಕವಿಗಳಿಗೂ ಅಷ್ಟೇ ಎಷ್ಟು ಬರೆದರೂ ಸಾಲದು. ಅಮ್ಮ ಮತ್ತೆ ಹೊಸತಾಗಿಯೇ ಅವತಾರ ತಾಳುತ್ತಾಳೆ. ಡಾ. ಜಯಪ್ರಕಾಶ ಮಾವಿನಕುಳಿಯವರು ಅಮ್ಮನ ಕುರಿತು ಎರಡು ಕವಿತೆಗಳಲ್ಲಿ ತಮ್ಮ ಅನುಭವವನ್ನು ದಾಖಲಿಸಿದ್ದಾರೆ.

*ನನ್ನ ಅಮ್ಮ ಎಂಟು ಮಕ್ಕಳು ಕುಡಿದ ಜೋತು ಬಿದ್ದ ಜೋಡಿ ಮೊಲೆ ನೂರು ಸುಕ್ಕಿನ ಮುಖ* ಎಂದು ಅಮ್ಮನ ರೂಪವನ್ನು ಚಿತ್ರಿಸಿದ್ದಾರೆ. ಅಮ್ಮ ಮತ್ತು ಬೆಕ್ಕು ಕವಿತೆಯ

ಮತ್ತೆ ಬೆಕ್ಕಿಗೆ ಹೊಸ ಬಸಿರು । ಕಣ್ಣಲ್ಲೇ ಅಳುವ ಬೆಕ್ಕು

ನಡುಗುವ ಬೆಕ್ಕಿನ ಕಣ್ಣಲ್ಲಿ । ಒಂಭತ್ತು ಹಡೆದ ಅಮ್ಮನ ಕಣ್ಣು

ಈ ಸಾಲುಗಳಲ್ಲಿ ಅಮ್ಮ ಹೆರುವ ಯಂತ್ರವಾದ ಬಗ್ಗೆ ಕನಿಕರವಿದೆ. ಬೆಕ್ಕಿನಂತೆ ಮಕ್ಕಳನ್ನು ಜೋಪಾನವಾಗಿ ಕಾಪಿಟ್ಟು ಪೊರೆಯುವ ಅಮ್ಮ ಅಮರಳಾಗುತ್ತಾಳೆ.

ಬಂಡಾದವರನ್ನು ಅಮ್ಮ ಬಿಟ್ಟಿಲ್ಲ. ಯಾವ ತಲೆಮಾರಾದರೇನು, ಯಾವ ಊರುಕೇರಿಯಾದರೇನು, ಚಳುವಳಿ ಯಾವುದಾದರೇನು ಎಲ್ಲರಿಗೂ ಅಮ್ಮ ಇರಲೇಬೇಕಲ್ಲ. ಅಮ್ಮನಿಲ್ಲದ ಜೀವ ಸೃಷ್ಟಿ ಇಲ್ಲ. ಬರಗೂರು ರಾಮಚಂದ್ರಪ್ಪನವರು ಅಮ್ಮನನ್ನು ಕಾಣುವ ಬಗೆ;

ಸೀಳು ಹಾದಿಯಲ್ಲಿ ಕೊಳೆ ಹೊಲದಲ್ಲಿ ಕಾಲು ಬಲಿತು । ಕೂದಲ ನೆರೆತವಳು

ಭೂತ ಗರ್ಭದಲ್ಲಿ ಹೊತ್ತು ವರ್ತಮಾನದಲ್ಲಿ ಹೆತ್ತು । ಭವಿಷ್ಯದ ಬಾಗಿಲಿಗೆ ನನ್ನ ಬಿಟ್ಟವಳು ।

ಭೂತ, ವರ್ತಮಾನ ಮತ್ತು ಭವಿಷ್ಯಗಳಲ್ಲಿ ಅಮ್ಮನ ಪಾತ್ರದ ಪ್ರಭಾವ ನಮ್ಮ ಮೇಲಿದ್ದೇ ಇರುತ್ತೆ. ಶಿ.ಜು ಪಾಶರ ಅಮ್ಮಿ ಕವಿತೆಯಲ್ಲಿ ಅಮ್ಮನನ್ನು ಸಾರ್ವಜನಿಕ ಸ್ಥಳಗಳಲ್ಲಿ ಕಾಣುವ ಆತುರ. ಪರಂಪರೆಯನ್ನು ಪ್ರಶ್ನಿಸುವ ಎದೆಗಾರಿಕೆ ಅಮ್ಮನಲ್ಲಿ ಮೂಡಿತೆಂಬ ಹೆಮ್ಮೆ. ಆಕೆಯದು ಮನದಾಳದಲ್ಲಿ ಬೇರು ಬಿಟ್ಟಿದ್ದ ಮೌಢ್ಯವನ್ನು ಕಿತ್ತೊಗೆದ ಪ್ರಯತ್ನ ಕೊನೆಗೂ

ಅಮ್ಮಿ ಅಂಗಳ ಕೈಬಿಟ್ಟು । ಹೋಟೆಲುಗಳಲ್ಲಿ, ಸೆಲೂನುಗಳಲ್ಲಿ

ಕುಳಿತು ಬಂದಳು । ಅಪ್ಪ ಮೌನಿಯಾಗಿದ್ದ

ಸಂಪ್ರದಾಯವನ್ನು ಮೀರಿ ಹೊರ ಜಗತ್ತಿಗೆ ಕಾಲಿಡುವ ಅಮ್ಮನನ್ನು ಕುತೂಹಲ, ಸಂಭ್ರಮಗಳಿಂದ ಕವಿ ಆದರಿಸುತ್ತಾರೆ. ಗೌರವಿಸುತ್ತಾರೆ.

ಅಮ್ಮನ ಪರಿಕಲ್ಪನೆಯನ್ನು ಸ್ತ್ರೀವಾದಿ ಕವಿತೆ ಬಂಡಾಯದ ಧ್ವನಿಯಲ್ಲಿ ಪುನರ್‍ರಚಿಸಿದೆ. ಅಮ್ಮನನ್ನು ಸಂಪ್ರದಾಯದ ಮುಸುಕಿನಿಂದ ಹೊರತಂದು ಅಧುನಿಕತೆಯ ಸ್ಪರ್ಶ ನೀಡುವ ಪ್ರಯತ್ನವನ್ನು ಅನೇಕ ಕವಯತ್ರಿಯರು ಮಾಡಿದ್ದಾರೆ. ಹಳೇ ಕಾಲದ ಅಮ್ಮನ ಮನೋಧರ್ಮವನ್ನು ತಿರಸ್ಕರಿಸುವ ಅಮ್ಮನ ಕುರಿತ ಕವಿತೆಗಳು ಪ್ರಕಟವಾಗಿವೆ. ಸ. ಉಷಾರು ತಮ್ಮ ಅಮ್ಮನಿಗೆ ಕವಿತೆಯಲ್ಲಿ

ನಿನ್ನಮ್ಮ, ಅವಳಮ್ಮ, ಅವಳಮ್ಮ । ಲಾಗಾಯ್ತಿನಿಂದ ನನ್ನಂಥ ಪಡ್ಡೆಗಳ

ಕಿವಿಯಲ್ಲಿ ಊದಿದ ಪುಂಗಿ ನೀನೂ! ಊದಬೇಡ

ಎಂದು ಹೊಸ ಕಾಲದ ಹೆಣ್ಣಿನ ಆಶಯವನ್ನು ವ್ಯಕ್ತಪಡಿಸುತ್ತಾರೆ. ಇನ್ನೂ ಅಮ್ಮನ ಸೆರಗಿನಲ್ಲಿ ಮುಖ ಮರೆಸಿಕೊಂಡು ಬದುಕುವ ಅಗತ್ಯವಿಲ್ಲವೆಂದು ಆಕೆಗೆ ಮನವರಿಕೆ ಮಾಡುತ್ತಾರೆ. ವೈಚಾರಿಕತೆಯ ನೆಲೆಗಟ್ಟಿನ ಮೇಲೆ ತನ್ನ ಬದುಕಿನ ಭದ್ರ ಬುನಾದಿ ಕಟ್ಟಿಕೊಳ್ಳುವ ಛಾತಿ ತನಗಿದೆ ಎಂದು ತಾಯಿಗೆ ಧೈರ್ಯ ತುಂಬುತ್ತಾಳೆ

ಚ.ಸರ್ವಮಂಗಳರು ತಮ್ಮ *ತಡೆ* ಕವನದಲ್ಲಿ ಅಮ್ಮನ ಹಳೆತನವನ್ನು ನಯವಾಗಿ ತಿರಸ್ಕರಿಸುತ್ತಾರೆ.

ಏನೇ ಹೇಳು। ತೊಡೆ ಸಂಧಿಯಲ್ಲಿ ಬದುಕು ಹುದುಗಿಸಿ

ಬದುಕಲಾರೆ ನೀನು ಅಜ್ಜಿ ಸುತ್ತಿದ । ವರ್ತುಲದೊಳಗೆ ಸುತ್ತಲಾರೆ

ಎಂಬಲ್ಲಿ ಇಂದಿನ ತಾಯಿಯ ಮನಸ್ಸು ಬದಲಾಗಬೇಕಾದ ಅನಿವಾರ್ಯತೆ ಇದೆ. ತಾಯಿಯ ಚಿಂತನೆಗಳು ಕಾಲಕಾಲಕ್ಕೆ ಮರು ಹೊಂದಾಣಿಕೆ ಆಗಬೇಕಾದ ಆಶಯವನ್ನು ಇಂತಹ ಕವಿತೆಗಳಲ್ಲಿ ಕಾಣಬಹುದು.

ತಾಯಿಯೇ ಅಮ್ಮನಾಗಿ, ಅಮ್ಮನೇ ಅವ್ವನಾಗಿ ಕಾವ್ಯಲೋಕವನ್ನು ತುಂಬಿಕೊಂಡಿದ್ದಾಳೆ. ಅವ್ವನಲ್ಲಿ ಕಳ್ಳುಬಳ್ಳಿಯ ಸಂಬಂಧ ಹೆಚ್ಚು ಒತ್ತರಿಸಿದಂತಿದೆ. ಅವ್ವನಿಗೆ ಅವ್ವನೇ ಸಾಟಿ. ಮಮತೆಯನ್ನೇ ಉಣಲಿಕ್ಕಿ ಮುದ್ದೆಗೆ ಸಾರು ಹುಯ್ದು *ಉಣ್ಣೊ ನನ್ರಾಜ* ಅನ್ನುತ್ತಾ ಮೊಖ ಸವರುವಂಥಾ ಸಾಂಗತ್ಯ ಅವ್ವನಲ್ಲಿ ಮಾತ್ರ ಸಾಧ್ಯ. ಪಿ.ಲಂಕೇಶರು *ಅವ್ವ* ಬರೆದ ಇಪ್ಪತ್ತಾನಾಲ್ಕು ವರ್ಷಗಳ ನಂತರ *ಅವ್ವ–2* ಬರೆದರು. ಅವ್ವ ಅತ್ತದ್ದು ಕಾಸಿಲ್ಲದ್ದಕ್ಕೆ, ಕೆಟ್ಟಪೈರಿಗೆ, ಸತ್ತ ಕರುವಿಗೆ, ತಪ್ಪಿಸಿಕೊಂಡ ಮುದಿ ಎಮ್ಮೆಗೆ ಸ್ವಾಭಿಮಾನದ ಸತಿ ಆಕೆ. *ನನ್ನವ್ವ ಬದುಕಿದ್ದು . . . . . . . ಅನ್ನ ರೊಟ್ಟಿ ಹಜಾಡಕ್ಕೆ, ಸರೀಕರ ಎದುರು ತಲೆಯೆತ್ತಿ ನಡೆಯಲಿಕ್ಕೆ* ಎಂದು ಅವ್ವನ ನಿಸ್ವಾರ್ಥ ಶ್ರಮವನ್ನು ವಿವರಿಸುತ್ತಾರೆ. *ಅವ್ವ–2* ರ ಹೊತ್ತಿಗೆ ಆಕೆ ವೈಚಾರಿಕತೆಯನ್ನು ಮೈಗೂಡಿಸಿಕೊಂಡಿದ್ದಾಳೆ.

ಎಲ್ಲ ಬೌದ್ಧಿಕ ಆರ್ಭಟಗಳಿಗೆ । ಕಡಿವಾಣ ಹಾಕುವ ಹೆಣ್ಣಿನ ಮಮತೆ

ಜಗಳಗಂಟಿಯಾಗಿದ್ದ ಈ ಅವ್ವ ಈಗ ನನ್ನಲ್ಲಿ । ವಿನಯ ಮತ್ತು ಮೌನ

ಬೆಳೆದು ದೊಡ್ಡವನಾಗಿ ವಿದ್ಯಾವಂತನಾದ, ಬೌದ್ಧಿಕವಾಗಿ ಹಿಗ್ಗಿದ ಮಗನಲ್ಲೂ ವಿನಯ ಮತ್ತು ಮೌನವನ್ನು ಹದವಾಗಿ ತುಂಬುವ ಕಲೆ ಗೊತ್ತಿರುವುದು ಅವ್ವನಿಗೆ ಮಾತ್ರ.

ಅವ್ವನೆಂದರೆ ಅದೊಂದು ಅದ್ಭುತ. ಅವ್ವಯೆಂದರೆ ಎದೆ ತುಂಬುವ ಅಮೃತ ಅವ್ವಾ ಎಂದುಲಿವಾಗ ಆಗುವ ಆನಂದ ಅನಂತ. ಅದ್ಭುತಾನಂದಗಳ ಆಗರವಾದ ಅವ್ವನ ಸ್ವಭಾವ ಪದರ ಪದರಗಳಾಗಿ ಬಿಚ್ಚಿಕೊಳ್ಳುತ್ತ ಮೈಮನ ಆವರಿಸಿಕೊಳ್ಳುತ್ತದೆ. ಡಾ.ಸರಜೂಕಾಟ್ಕರನನ್ನು ಅವ್ವ ಬೆನ್ನು ಬಿಡದೆ ಕಾಡಿದ್ದಾಳೆ. ತಮ್ಮ *ಅವ್ವ* ಸಂಕಲನದಲ್ಲಿ ಅವ್ವನ ಕುರಿತ ಆರು ಕವಿತೆಗಳನ್ನು ರಚಿಸಿ ಅವ್ವನ ಋಣ ಸಂದಾಯ ಮಾಡಿದ್ದಾರೆ. ವಿಭಿನ್ನ ಚಿಂತನೆಯ ಅವ್ವನನ್ನು ಡಾ.ಸರಜೂ ಕಾಟ್ಕರ ಅಭಿವ್ಯಕ್ತಿಸುತ್ತಾರೆ. *ಅವ್ವ ಮತ್ತು ವಿಶ್ವವಿದ್ಯಾನಿಲಯ* ಕವಿತೆಯಲ್ಲಿ ಅವ್ವನ ಕಣ್ಣೀರು ಮಿಶ್ರಿತ ರೊಟ್ಟಿಯಲ್ಲಿ ಭೀಮಬಲವಿದೆ. ಅದ್ದರಿಂದಲೇ ಇಂದು ತಾನು ಇಷ್ಟು ಗಟ್ಟಿಯಾಗಿರುವುದು ಎಂದು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಹೇಳು: ಹೃದಯದ ಯಾವ ಮೂಲೆಯಲ್ಲಿ । ನಿನ್ನ ಹೆಸರನ್ನು ಕೊರೆದುಕೊಳ್ಳಲಿ?

ಅಥವಾ ಜಗತ್ತಿನ ಅದ್ಯಾವ ವಿಶ್ವವಿದ್ಯಾನಿಲಯವನ್ನು । ನಿನ್ನ ಹೆಸರಿನಿಂದ ಕರೆಯಲಿ?

ಹೃದಯದಲ್ಲಿ ಅವ್ವನ ಹೆಸರು ಕೊರೆದರೂ ಅವ್ವನಿಗೆ ಸಾಲದು. ಆಕೆ ಜಗತ್ತಿನ ವಿಶ್ವವಿದ್ಯಾನಿಲಯ. ಇಂಥಾ ಅವ್ವ ಸತ್ತರೆ ಯಾತನೆ ಅನುಭವಿಸೋದು ಮನಷ್ಯ ಮಾತ್ರವಲ್ಲ, ಅವ್ವ ಸತ್ತದಿನ

ಮಟಮಟ ಮಧ್ಯಾಹ್ನದಲ್ಲಿಯೇ । ಮುಳಗಿಹೋದ ಸೂರ್ಯ

ಸ್ತಬ್ಧವಾಯಿತು ಗಾಳಿ । ಕಾಡಿಗೆ ಹೋದ ದನಗಳೆಲ್ಲ ಮರಳಿ ಮನೆಗೆ

ಚಲನೆಯಿಲ್ಲದ ಪ್ರಕೃತಿ । ಕೆಟ್ಟು ಹೋದ ಮತಿ

ಹಾಡಲಲ್ಲಿ ಕೋಗಿಲೆ । ಅರಳಿಲ್ಲ ಹೂವು

ಏನೆಲ್ಲ ಘಟಿಸಿ ಹೋಯಿತು. ಸೂರ್ಯನಿಂದ ಚಂದ್ರನವರೆಗೆ ಅವ್ವನನ್ನು ಹರಹಿಕೊಳ್ಳುವ ಈ ಕಾವ್ಯಕ್ರಿಯೆ ಅನಂತ ಪ್ರೇಮದ ಋಜುವಾತಾಗಿದೆ. ಇಡೀ ಪ್ರಕೃತಿಯೇ ಅವ್ವನಿಗೆ ಧನ್ಯತಾಭಾವ ಸೂಚಿಸುವ ಅಪರೂಪದ ಕಾವ್ಯಕೃತಿ ಇದು.

ಇನ್ನೂ ಹಲವು ಅವತಾರಗಳಲ್ಲಿ ಅವ್ವ ಅಲ್ಲಲ್ಲಿ ಸುಳಿಯುತ್ತಾಳೆ. ಜರಗನಹಳ್ಳಿ ಶಿವಶಂಕರರಿಗೆ ಜನನಿಯಾಗಿ, ಮೃಷ್ಟಾನ್ನದ ಕೋಶವಾಗಿ ಕಂಡಿದ್ದಾಳೆ. ಎರವಲು ಕರುಳ ಪಡೆಯದ ನನ್ನ ತಾಯಿ ಅನಂತವೆಂದು ಜರಗನಹಳ್ಳಿಯವರು ವಿಶ್ಲೇಷಿಸುತ್ತಾರೆ.

ಅಗಳು ಅಗಳಿನಲ್ಲು । ಮೃಷ್ಟಾನ್ನದ ಮೊಲೆಗಳು

ಉಣಿಸಿ ತಣಿಸಿ ಅವಳು । ಸದಾ ನನ್ನ ಪೊರೆದಳು

ಜರಗನಹಳ್ಳಿಯವರಿಗೆ ಇಂತಹ ಜನನಿ ಆಶೀರ್ವಾದಿಸುತ್ತಾಳೆ. ಕೆ.ಎಸ್.ನಿಸಾರ್ ಅಹಮದ್‌ರು *ಹೆತ್ತಾಕೆ* ಯಾಗಿ ಆಕೆಯನ್ನು ಸ್ವೀಕರಿಸುತ್ತಾರೆ. ಹೆತ್ತಾಕೆ: ಚಿಂತೆಯ ಚಳಿಗೆ ಚೆಲುರಜಾಯಿ ........... ಇಹಪರದ ನಡುಗಡಲ ತೋರು ದೀಪ.

ತಾಯಿಯ ಅಮೂಲ್ಯ ಲಾಲನೆ, ಅದಮ್ಯ ಪ್ರೀತಿ, ವಾತ್ಸಲ್ಯಗಳ ಮಹಾಪೂರದೆದುರು ಉಳಿದಿದ್ದೆಲ್ಲ ಗೌಣ. ಪ್ರತಿಯೊಬ್ಬರಿಗೂ ತಾಯಿ ಕರುಳಿನ ಸಂವೇದನೆ ಆವರಿಸಿರುತ್ತದೆ. ಕೆಟ್ಟ ತಂದೆಯೂ ಇರಬಹುದು, ಮಕ್ಕಳೂ ಇರಬಹುದು. ಆದರೆ ಕೆಟ್ಟ ತಾಯಂದಿರು ಇರಲಾರರು ಎಂಬ ಮಾತಿನಲ್ಲಿ ಉತ್ಪ್ರೇಕ್ಷೆ ಇದ್ದರೂ ಸತ್ಯವಂತೂ ಇದ್ದೇ ಇದೆ. ತಾಯಿ ಏನೇ ನಿರ್ಧಾರಗಳನ್ನು ತೆಗೆದುಕೊಂಡರೂ, ಅದು ತನ್ನ ಮಕ್ಕಳ ಒಳಿತಿಗಾಗಿ ಎಂಬ ಧ್ವನಿ ಈ ಹೇಳಿಕೆಯಲ್ಲಿದೆ. ಹಾಗೆ ತೆಗೆದುಕೊಂಡ ನಿರ್ಧಾರಗಳು ಕೆಲವೊಮ್ಮೆ ಬೇರೆಯವರಿಗೆ ತಪ್ಪಾಗಿ ಕಾಣಬಹುದು. ಅದು ಸಹಜ. ಎಷ್ಟಾದರೂ ಆಕೆಯೂ ಮನುಷ್ಯಳೇ. ಮಿಗಿಲಾಗಿ ತಾಯಿ. ಎಲ್ಲ ತಾಯಂದಿರೂ, ಅಮ್ಮ ಅವ್ವಂದಿರು ತಮ್ಮ ಮಕ್ಕಳ, ಗಂಡನ, ಕುಟುಂಬದ ಪರವಾಗಿ ಯೋಚಿಸುವುದರಿಂದ, ಇನ್ನೊಬ್ಬರಿಗೆ ಅದು ಮುಳುವಾದಂತೆ ಅನಿಸಬಹುದು. ತನ್ನೊಡನೆ ಒಡನಾಡುವ ಪತಿಯನ್ನು ಕುರಿತು ಆಕೆಯ ಚಿಂತನೇ ಒಡಲಬಳ್ಳಿಯನ್ನು ಕರುತ ಆಕೆಯ ಮುಂದಾಲೋಚನೆ, ಮನೆತನವನ್ನು ಕಟ್ಟುವ ಯೋಜನೆ.

ನಲಿವಿರಲಿ, ನೋವಿರಲಿ, ಆಕೆಯ ಕಣ್ಣಲ್ಲಿ ಸದಾ ನೀರು. ಜೀವಂತಿಕೆಯ ಲಕ್ಷಣ ಅದು. ತನ್ನ ಬೆಟ್ಟದಂತಹ ಪ್ರೀತಿಯನ್ನು ಆಕೆ ಮೊಗೆಮೊಗೆದು ಕೊಟ್ಟಂತೆ ತಾಯನ್ನು ಕುರಿತ ಬರಹಗಳು ಮತ್ತೆ ಮತ್ತೆ ಸೃಜಿಸಲುತ್ತವೆ. ತಾಯಿ ಬುತ್ತಿಯ ಕೆಲವೇ ಕೆಲವು ತುತ್ತುಗಳನ್ನು ಉಣ್ಣುವ, ಸವಿಯುವ ಉದ್ದೇಶಕ್ಕಾಗಿ ಈ ನುಡಿ ನಮನ.